ದಿನಾಂಕ 09/11/2017 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್. ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿಲ್ಲ ನನಗೆ ಓದಲು ಬರೆಯಲು ಬರುವುದಿಲ್ಲ. 1 ನೇ ವಾದಿ ನನಗೆ ಅತ್ತಿಗೆ ಆಗಬೇಕು. ವಾದಿ ಏನು ಪರಿಹಾರ ಕೋರಿ ದಾವೆ ಹಾಕಿದ್ದಾರೆಂದು ನಾನು ತಿಳಿದುಕೊಂಡಿಲ್ಲ ಸಾಕ್ಷಿ ಸ್ವತಃ ನನ್ನ ತಂದೆ ಈ ಕೇಸು ನಡೆಸುತ್ತಿದ್ದರಿಂದ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಅವರ ಪರವಾಗಿಯೂ ನ್ಯಾ.ದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಕೊಟ್ಟಿದ್ದಾರೆ. ಆ ದಾಖಲೆಯನ್ನು ನ್ಯಾ.ಕ್ಕೆ ಕೊಟ್ಟಿದೆ. ನನ್ನ ಅಕ್ಕತಂಗಿಯರು 6 ರಿಂದ 11 ನೇ ಪ್ರತಿವಾದಿಗಳು ಅವರ ಪರವಾಗಿಯೂ ಸಾಕ್ಷಿ ನುಡಿಯಲು ಲಿಖಿತವಾಗಿ ನೋಟಿಸ್ ಕೊಟ್ಟಿದ್ದರು ಆ ದಾಖಲೆಯನ್ನು ನ್ಯಾ.ಕ್ಕೆ ಕೊಟ್ಟಿದ್ದೇನೆ. 1 ನೇ ವಾದಿ ಏನೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿ ಹಾಜರು ಪಡಿಸಿರುವ ವಂಶವೃಕ್ಷದ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ನನ್ನ ಕುಟುಂಬದ ವಂಶವೃಕ್ಷವನ್ನು ನ್ಯಾ.ಕ್ಕೆ ಕೊಟ್ಟಿದ್ದೇನೆ. ಮಹಾದೇವಯ್ಯ ನನ್ನ ದೊಡ್ಡಪ್ಪ ಅವರು ಎಷ್ಟನೇ ಇಸವಿಯಲ್ಲಿ ತೀರಿ ಹೋದರು ಎಂದು ಗೊತ್ತಿಲ್ಲ ಅವರ ಹೆಂಡತಿ ಚಿಕ್ಕಮಲ್ಲಮ್ಮ ಜೀವಂತ ಇದ್ದಾರೆ. ನನ್ನ ಚಿಕ್ಕಪ್ಪ ಸೋಮಶೇಖರ ಯಾವಾಗ ತೀರಿ ಹೋದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ವಸಂತಮ್ಮ ಮತ್ತು ಜಾನಕಿ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರ ಇಬ್ಬರ ಹೆಂಡತಿಯರು ಈಗ ತೀರಿ ಹೋಗಿದ್ದಾರೆ. ಸೋಮಶೇಖರವರ ಮುಖಾಂತರ ವಸಂತಮ್ಮ ಮತ್ತು ಜಾನಕಿಗೆ ಮಕ್ಕಳು ಇರಲಿಲ್ಲ. ಮಹದೇವಯ್ಯನ ಹೆಂಡತಿ ಚಿಕ್ಕಮಲ್ಲಮ್ಮನಿಗೂ ಮಕ್ಕಳಿಲ್ಲ. 1 ನೇ ಪ್ರತಿವಾದಿ ಕಾರ್ತಿಕ್ ಎಂಬ 2 ನೇ ಪ್ರತಿವಾದಿಯನ್ನು ದತ್ತು ತಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ದತ್ತು ಪತ್ರ ನೊಂದಣಿಯಾಗಿರುವುದು ನನಗೆ ಗೊತ್ತಿಲ್ಲ. ನಾನು 1970 ರಲ್ಲಿ ಜನಿಸಿದ್ದೇನೆ. ವಾದಿಯ ಗಂಡ ಉಮೇಶನನ್ನು 1966-67 ನೇ ಸಾಲಿನಲ್ಲಿ ಮಹದೇವಯ್ಯ ಮತ್ತು ಚಿಕ್ಕಮಲ್ಲಮ್ಮ, ಸೋಮಶೇಖರ ಮತ್ತು ವಸಂತ 1 ನೇ ವಾದಿಯ ಗಂಡ ಉಮೇಶನನ್ನು ದತ್ತು ಪಡೆದಿದ್ದಾರೆ ಎನ್ನುವುದಕ್ಕೆ ದಾಖಲೆಯನ್ನು ನ್ಯಾ.ಕ್ಕೆ ಕೊಟ್ಟಿದ್ದೇನೆ. ಆ ದತ್ತು ಪತ್ರ ನೊಂದಣಿ ಆಗಿದೆ. ಆ ಪತ್ರವನ್ನು ನನ್ನ ವಕೀಲರಿಗೆ ನನ್ನ ತಂದೆ ಕೊಟ್ಟಿದ್ದರು. ಆ ಪತ್ರ ಆದ ಸಮಯದಲ್ಲಿ ನಾನು ಇನ್ನೂ ಹುಟ್ಟಿರಲಿಲ್ಲ. ಅದರ ಬಗ್ಗೆ ಮಾಹಿತಿ ನನ್ನ ತಂದೆಗೆ ಗೊತ್ತಿದೆ. ನನ್ನ ತಂದೆಯನ್ನು ಈ ನ್ಯಾ.ದ ಮುಂದೆ ಸಾಕ್ಷಿ ಮಾಡಿಸುವುದಿಲ್ಲ, ಸಾಕ್ಷಿ ಸ್ವತಃ ಅವರಿಗೆ ಹುಷಾರಿಲ್ಲ ಕಣ್ಣು ಕಾಣುವುದಿಲ್ಲ, ಕಿವಿ ಕೇಳುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಗೆ ಹುಷಾರಿಲ್ಲದ ದಾಖಲೆಯನ್ನು ನ್ಯಾ.ಕ್ಕೆ ಕೊಟ್ಟಿದ್ದೇನೆ. ದಾವಾ ಆಸ್ತಿಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳು. ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೂ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಆಗಿದೆ ಸ್ವಲ್ಪ ಆಗಿಲ್ಲ ಎಂದು ಹೇಳುತ್ತಾರೆ. ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಕಾಮಸಮುದ್ರದ ಆಸ್ತಿಗಳು ವಿಭಾಗ ಆಗಿವೆ ಎಂದು ಹೇಳುತ್ತಾರೆ. ಕಾಮಸಮುದ್ರದಲ್ಲಿ ಎಷ್ಟು ಸರ್ವೆ ನಂಬರ್‌ಗಳ ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ನಮ್ಮ ಒಟ್ಟು ಕುಟುಂಬದ ಆಸ್ತಿ ಗೊಂಧಿಮಲ್ಲೇನಹಳ್ಳಿಯಲ್ಲಿದೆ ಅಲ್ಲಿ 1 ಎಕರೆ 7 ಗುಂಟೆ ಇದೆ. ಸರ್ವೆ ನಂಬರ್ 61/1 ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಮೇಲ್ಕಂಡ ಸರ್ವೆ ನಂಬರ್‌ನಲ್ಲಿ ನನ್ನ ಕುಟುಂಬದವರ ನಡುವೆ ವಿಭಾಗ ಆಗಿಲ್ಲ. 1 ನೇ ವಾದಿಗೆ ಗೊಂಧೀಮಲ್ಲೇನಹಳ್ಳಿ ಆಸ್ತಿಯಲ್ಲಿ ಭಾಗ

ಬರಬೇಕು ಎಂದರೆ ಸಾಕ್ಷಿ ಪುನಃ ಬರಬೇಕು ಎಂದು ಹೇಳುತ್ತಾರೆ. ರಂಗಣ್ಣ ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಸೋಮಶೇಖರ ಮತ್ತು ಮಹದೇವ ಎಂಬುವವರು ಮಾರಿದ್ದಾರೆ. 1958 ರಲ್ಲಿ ವಿಭಾಗ ಆಗಿರುವ ಬಗ್ಗೆ ದಾಖಲೆಗಳು ಇವೆ. ಆ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಆ ದಾಖಲೆಗಳಲ್ಲಿ ಯಾರ್ಯಾರಿಗೆ ಎಷ್ಟು ಆಸ್ತಿ ಹೋಗಿದೆ ಎಂದು ನಾನು ತಿಳಿದುಕೊಂಡಿಲ್ಲ ನನ್ನ ತಂದೆಗೆ ಗೊತ್ತು. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ನನ್ನ ತಂದೆಗೆ ಹೆಚ್ಚು ಮಾಹಿತಿ ಗೊತ್ತು ಎಂದು ಬರೆಸಿದ್ದೇನೆ. ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರು ಎಲ್ಲರೂ ನಿವೃತ್ತ ಶಿಕ್ಷಕರು. ನನ್ನ ತಂದೆಗೆ ವ್ಯವಹಾರ ಜ್ಞಾನ ಚೆನ್ನಾಗಿ ಇತ್ತು. 1958 ರಲ್ಲಿ ನಾನು ಹುಟ್ಟಿರಲಿಲ್ಲ. ಗೊಂಧೀಮಲ್ಲೇನಹಳ್ಳಿಯಲ್ಲಿರುವ ಆಸ್ತಿಗಳು ಇನ್ನೂ ವಿಭಾಗ ಆಗಿಲ್ಲ. ನನ್ನ ಅಜ್ಜ ಮೈಲಾರಯ್ಯ ಕೆ.ನಾರಾಯಣಪ್ಪ ಎಂಬುವವರಿಗೆ ಸುಮಾರು ಆಸ್ತಿಗಳನ್ನು ಭೋಗ್ಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪ ಸಹಿ ಮಾಡುವುದನ್ನು ನಾನು ನೋಡಿರುವುದಿಲ್ಲ. ದಿನಾಂಕ 02-03-1982 ರಲ್ಲಿ ಮಹದೇವ, ಸೋಮಶೇಖರ ಮತ್ತು ಶಿವರಾಜುರವರ ನಡುವೆ ವಿಭಾಗ ಪತ್ರ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪತ್ರಕ್ಕೆ ನನ್ನ ತಂದೆ ಸಹಿ ಹಾಕಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾರಾಯಣಪ್ಪನವರ ಹೆಸರಿಗೆ ಇದ್ದ ಭೋಗ್ಯವನ್ನು ಒ.ಎಸ್. 855/64 ದಾವೆಯಲ್ಲಿ ಖುಲಾಸೆ ಡಿಕ್ರಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ ಅದು ನನ್ನ ತಂದೆಗೆ ಗೊತ್ತು. ಆ ಡಿಕ್ರಿಯಂತೆ ಜಾರಿ ಸಂಖ್ಯೆ 650/74 ರಂತೆ ಭೋಗ್ಯ ಆಸ್ತಿಗಳನ್ನು ನಮ್ಮ ಕುಟುಂಬಕ್ಕೆ ಭೋಗ್ಯದಾರರಿಂದ ಬಂದಿದೆ ಎಂದರೆ ಸರಿ. ದಿನಾಂಕ 26-05-1991 ರಂದು ಕುಟುಂಬದ ಎಲ್ಲಾ ಸದಸ್ಯರು ತಹಸೀಲ್ದಾರರ ಮುಂದೆ ಒಪ್ಪಿಗೆ ಕೊಟ್ಟು ಮೊದಲನೆಯ ಮಗ ಮಹದೇವಯ್ಯನವರ ಹೆಸರಿನಲ್ಲಿ ಕುಟುಂಬದ ಎಲ್ಲಾ ಆಸ್ತಿಗಳು ಇರಲು ಒಪ್ಪಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು ಎಂದು ಹೇಳುತಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ನನಗಿಂತ ನನ್ನ ತಂದೆಗೆ ಹೆಚ್ಚಿಗೆ ಗೊತ್ತು. ಅವರು ಈಗಲೂ ಈ ಎಲ್ಲಾ ವಿಚಾರಗಳ ಬಗ್ಗೆ ಹೇಳುತ್ತಾರೆ. ಅವರನ್ನು ನ್ಯಾ.ಕ್ಕೆ ಕರೆಸಿ ವಿಚಾರಣೆ ಮಾಡಿಸುತ್ತೇನೆ. ಮೈಲಾರಯ್ಯನವರ ಹೆಸರಿಗೆ ಬಂದ ಆಸ್ತಿಗಳಲ್ಲಿ ಇಲ್ಲಿಯವರೆಗೂ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಆಗಿದೆ ಸ್ವಲ್ಪ ಆಗಿಲ್ಲ ಎಂದು ಹೇಳುತ್ತಾರೆ. 1958 ರಲ್ಲಿ ವಿಭಾಗ ಆಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಈ ದಾವೆ ಹೂಡುವುದಕ್ಕೂ ಮೊದಲು ಗ್ರಾಮದಲ್ಲಿ ಪಂಚಾಯತಿಯಲ್ಲಿ ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆ ಹೂಡಿದ ನಂತರವೂ ಸುಮಾರು ಆಸ್ತಿಗಳನ್ನು ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿ 27 ಗುಂಟೆ ಮಾತ್ರ ಹೆಣ್ಣು ಮಕ್ಕಳ ಮದುವೆಗೆ ಮಾರಿದ್ದೇವೆ ಎಂದು ಹೇಳುತ್ತಾರೆ. ಈ 27 ಗುಂಟೆಯನ್ನು ದಾವೆ ಹೂಡುವ ಮೊದಲೇ ಮಾರಾಟ ಮಾಡಿದ್ದೇನೆ. ನಾಗಯ್ಯ ಮತ್ತು ಯೋಗೇಶ ಎಂಬುವವರಿಗೆ ನಮ್ಮ ತಂದೆ ಮತ್ತು ನಾವುಗಳೇ ಮಾರಾಟ ಮಾಡಿದ್ದೇವೆ. ನಾವು ಮಾರಾಟ ಮಾಡುವ ಸಮಯದಲ್ಲಿ ಈ ದಾವೆ ಹೂಡಿತ್ತು ಎಂದರೆ ಸರಿಯಲ್ಲ. ಒಟ್ಟು 3 ಕ್ರಯ ಪತ್ರಗಳನ್ನು ಒಂದೇ ದಿನ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ದಿನಾಂಕ 05-01-2009 ರಂದು ಜಾನಕಿ ಎಂಬುವವರು ಒಂದು ಆಸ್ತಿಯನ್ನು ದಾವೆ ಹೂಡಿದ ನಂತರ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ದಿನಾಂಕ 18-04-2013 ರಂದು ನನ್ನ ತಂದೆ ಶಿವರಾಜು ಅನಸೂಯಾ ಎಂಬುವವರಿಗೆ 13/02 ರಲ್ಲಿ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. 1 ನೇ ವಾದಿ 2008 ರಲ್ಲಿ ದಾವೆ ಮಾಡಿದ್ದಾರೆ ಎಂದರೆ ಸರಿ.

ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.